**ಕರ್ನಾಟಕ ಸರ್ಕಾರ**

**ಶಾಲಾ ಶಿಕ್ಷಣ ಇಲಾಖೆ ( ಪದವಿ ಪೂರ್ವ )**

## ಮಾದರಿ ಪ್ರಶ್ನೆಪತ್ರಿಕೆ– 1

**ತರಗತಿ** : ಪ್ರಥಮ ಪಿಯುಸಿ **ಶೈಕ್ಷಣಿಕ ವರ್ಷ**: 2024–25

**ವಿಷಯ** : ಕನ್ನಡ (01) **ಗರಿಷ್ಠ ಅಂಕಗಳು**: 80

**ಸಮಯ** : 3 ಗಂಟೆಗಳು **ಒಟ್ಟು ಪ್ರಶ್ನೆಗಳ ಸಂಖ್ಯೆ**: 52

**ಸೂಚನೆ** :

**"ಅ"ವಿಭಾಗ"ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.**

## ಅ- ವಿಭಾಗ

**(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.**

**10x1=10**

1) ಎಲ್ಲರಿಗೂ ದಕ್ಕುವ ಹಣ್ಣು

ಅ) ಬಾಳೆಹಣ್ಣು ಆ) ಸೀಬೆಹಣ್ಣು

ಇ) ಮೂಸಂಬಿಹಣ್ಣು ಈ) ಎಲಚಿಹಣ್ಣು

2) ಪುಟ್ಟ ದಿಟ್ಟ ಹಕ್ಕಿಗಳೇ

ಕೋಟಿ ಕಂಠದಲಿ ಹಾಡಿ

ಕಾಡು ಕಣಿವೆ ಬೆಟ್ಟಗಳು ಮಾರ್ದನಿಸಲಿ

ಮತ್ತೆ ಸೂರ್ಯ ಬರುತ್ತಾನೆ. – ಈ ಪದ್ಯಭಾಗದ ಮತ್ತೆ ಸೂರ್ಯ ಬರುತ್ತಾನೆ ಸಾಲು ಏನನ್ನು ಸೂಚಿಸುತ್ತದೆ?

ಅ) ಸೂರ್ಯೋದಯವನ್ನು

ಆ) ಕತ್ತಲನ್ನು ಹೊಡೆದೋಡಿಸಿದ್ದನ್ನು

ಇ) ಭವಿಷ್ಯದ ದಿನಗಳಲ್ಲಿ ಕಾಲ ಬದಲಾಗುತ್ತದೆ ಎಂಬ ಭರವಸೆಯನ್ನು

ಈ) ಭವಿಷ್ಯದ ಬಗ್ಗೆ ಭಯವನ್ನು

3) ಮಾಯವಾಗಿರುವ ದ್ವೀಪ

ಅ) ಲಕ್ಷದ್ವೀಪ ಆ) ಹವಳಗಳ ದ್ವೀಪ

ಇ) ಸೆಂಟ್ ಮೇರಿಸ್ ದ್ವೀಪ ಈ) ಅಂಡಮಾನ್ ದ್ವೀಪ

4) ಹೊಲಿಗೆ ಯಂತ್ರದ ಜೊತೆಗೆ ಅಮ್ಮ ಕಳೆದ ಕಾಲ

ಅ) ಒಂದು ಶತಮಾನ ಆ) ಅರ್ಧ ಶತಮಾನ

ಇ) ಎರಡು ಶತಮಾನ ಈ) ಕಾಲು ಶತಮಾನ

5) ಕವಿಯ ಬೆನ್ನನ್ನು ಮುಳ್ಳುಗಳಾಗಿ ಚುಚ್ಚುತ್ತಿರುವುದೇನು?

ಅ) ಜೀವಂತ ಸಮಾಧಿಗಳು ಆ) ಅಮೃತಶಿಲೆಯ ಸಮಾಧಿಗಳು

ಇ) ತನ್ನವರ ಸಮಾಧಿಗಳು ಈ) ಯಾರದೋ ಸಮಾಧಿಗಳು

6) ಕುಟುಂಬ ಯೋಜನಾ ವಿಸ್ತರಣಾಧಿಕಾರಿಯ ಹೆಸರು

ಅ) ರಾಮಾಂಜನೇಯ ಆ) ನರಸಿಂಹಮೂರ್ತಿ

ಇ) ನರಸಿಂಹ ಸ್ವಾಮಿ ಈ) ಕರಿಸಿದ್ದೇಗೌಡ

7) ನಮಗೆಲ್ಲಾ ರಾಗಿಮುದ್ದೆ! ಎಂದ ತಕ್ಷಣ ನೆನಪಾಗುವುದು ಬಡತನ ಹಾಗೂ ಕನ್ನಡತನ. ಒಂದು ಪ್ರದೇಶದ ಆಹಾರಪದ್ಧತಿಗೂ, ಸಂಸ್ಕೃತಿಗೂ ತಳುಕು ಹಾಕುವುದಾದರೆ ರಾಗಿಯನ್ನು ಬಿಡುವಂತಿಲ್ಲ. ರಾಗಿಮುದ್ದೆಯನ್ನು ಹೊರತುಪಡಿಸಿ ಕನ್ನಡ ಸಂಸ್ಕೃತಿಯ ಬಗ್ಗೆ ಮಾತನಾಡುವಂತಿಲ್ಲ – ಈ ಸಾಲುಗಳು ಏನನ್ನು ಸೂಚಿಸುತ್ತವೆ?

ಅ) ರಾಗಿಯ ಮೂಲ ಯಾವುದೆಂಬುದನ್ನು
ಆ) ರಾಗಿಯ ಪ್ರಾದೇಶಿಕತೆಯನ್ನು
ಇ) ಕರ್ನಾಟಕ ಪರಂಪರೆಯಲ್ಲಿ ರಾಗಿಯ ಮಹತ್ವವನ್ನು
ಈ) ಆಹಾರ ಪದ್ಧತಿಗೂ ಪರಂಪರೆಗೂ ಸಂಬಂಧವಿಲ್ಲ ಎನ್ನುವುದನ್ನು

8) ಬೋಳೇಶಂಕರನಿಂದ ಬೇರು ಕಿತ್ತುಕೊಳ್ಳಲು ಪಿಶಾಚಿ ಯಾವ ರೂಪದಲ್ಲಿ ಬರುತ್ತದೆ??

ಅ) ಸೈನಿಕ ಆ) ಸೈತಾನ
ಇ) ಮುದುಕ ಈ) ಮುದುಕಿ

9) ಸೈನಿಕರು ಯಾವುದಕ್ಕೆ ಜಯವಾಗಲಿ ಎಂದು ಹಾಡಿದರು?

ಅ) ಬೋಳೇಶಂಕರನಿಗೆ ಆ) ಸರದಾರನಿಗೆ
ಇ) ಸೈತಾನನಿಗೆ ಈ) ಕೋವಿಗೆ

10) ಕೈಯಿಂದ ಕೆಲಸ ಮಾಡೋದರಿಂದ ಬುದ್ಧಿ ಬರ್ತದೆ , ಬೆವರೂ ಬರ್ತದೆ, ಬೆವರು ಒರೆಸಿಕೊಂಡು ಬುದ್ಧಿ ಕಲಿಯೋನು ಜಾಣ – ಎಂಬ ಬೋಳೇಶಂಕರನ ಮಾತು ಏನನ್ನು ಧ್ವನಿಸುತ್ತದೆ?

ಅ) ಶ್ರಮಸಂಸ್ಕೃತಿಯ ಮಹತ್ವ ಆ) ಕೆಲಸದಿಂದಾಗುವ ಆಯಾಸ
ಇ) ಬೆವರು ಸುರಿಸುವುದು ವ್ಯರ್ಥ ಈ) ದುಡಿಮೆಯ ಅಪ್ರಸ್ತುತತೆ

**(ಆ) ಬಿಟ್ಟಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ. 5x1=05**

( ಭರತ, ಬಂಡವಾಳಶಾಹಿಗಳ, ಅಂಬವ್ವ, ನಿಂಗವ್ವ, ಡಿಸಿಎಂ, ವ್ಯಾಘ್ರಯಜ್ಞ )

11) ಶಾಸ್ತ್ರಿಮಾಸ್ತರರ ಹೆಂಡತಿಯ ಹೆಸರು__________________
12) ರಂಗರಾವ್ ಅವರು ______________________ಎಂಬ ಸಂಸ್ಥೆಯನ್ನು ಸ್ಥಾಪಿಸಿದರು.
13) ರಕ್ಕಾ ಕರಂಡಕವು______________________ಕೈಯಿಂದ ಕೆಳಗೆ ಬಿದ್ದಿತು.
14) ರೈತರ ಬದಲಿಗೆ ಸ್ವಾತಂತ್ರವು ______________________ ಕೈಗೆ ಸಿಕ್ಕಿತು.
15) ಮಹೇಂದ್ರನು______________________ವನ್ನು ಕೈಗೊಂಡಿದ್ದನು.

**(ಇ) ಹೊಂದಿಸಿ ಬರೆಯಿರಿ 5x1=05**

| | |
|---|---|
| 16. ಅ) ಮಗು ಮತ್ತು ಹಣ್ಣು | 1) ಡಾ. ಎಚ್. ಎಲ್ ಪುಷ್ಪ |
| ಆ) ಮತ್ತೆ ಸೂರ್ಯ ಬರುತ್ತಾನೆ | 2) ಜೈವಿಕ ಇಂಧನ |
| ಇ) ಸುನಾಮಿಯ ಹಾಡು | 3) ಮಳೆಬಿದ್ದ ನೆಲದಲ್ಲಿ |
| ಈ) ಹೊಲಿಗೆ ಯಂತ್ರದ ಅಮ್ಮಿ | 4) ಡಾ. ಲೋಕೇಶ ಅಗಸನಕಟ್ಟೆ |
| ಉ) ಜೀವಕೆ ಇಂಧನ | 5) ಜಂಗಮ ಫಕೀರನ ಜೋಳಿಗೆ |
| | 6) ಡಾ. ಬಿ. ಸಿ. ರಾಮಚಂದ್ರಶರ್ಮ |

## ಆ–ವಿಭಾಗ

**(ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. 3x2=06**

17. ಅಲ್ಲಮ ಏನನ್ನು ನೀಡುವುದರಿಂದ ನಾದೇವ ಎಂದು ಹೇಳುತ್ತಾನೆ?
18. ಮಾದೇವನ ಶಿಶುಮಕ್ಕಳ ಹೆಸರೇನು?
19. ರಾಕ್ಷಸಗಣ ಹತ್ಯೆಗೆ ಜನತೆ ಹೇಗೆ ಹೆಜ್ಜೆ ಇಡಬೇಕು?
20. ತಾನು ಬದುಕಿನಲ್ಲಿ ಇನ್ನೂ ಕಾಣಬೇಕಾಗಿರುವುದು ಏನೆಂದು ಒಡಲೊಳಗಿನ ಮಗುವು ಹೇಳುತ್ತದೆ?

**(ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. 2x2=04**

21. ಯಾವ ಕಾರಣದಿಂದ ಕ್ಯಾಂಟೀನ್ ರಸಮಯ ಸನ್ನಿವೇಶಗಳ ರಂಗಸ್ಥಳವಾಗಿತ್ತು?
22. ರಂಗರಾವ್ ತಮ್ಮ ಉಯಿಲಿನಲ್ಲಿ ಏನು ಬರೆದಿದ್ದರು?
23. ರೈತ ಚಳುವಳಿಗಳು ಎಲ್ಲೆಲ್ಲಿ ನಡೆದವು ?
24. ನರಿಯೊಡನೆ ಬರುತ್ತಿರುವ ಹುಲಿಯನ್ನು ಕಂಡ ನಾಪಿತನು ಏನೆಂದುಕೊಂಡನು?

**(ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. 3x2=06**

25. ಬೆಟ್ಟದ ಮೇಲಿನ ದೇವತೆಯು ಬೋಳೆಶಂಕರನ ಅಣ್ಣ ಅತ್ತಿಗೆಯರಿಗೆ ಹೇಗೆ ಕಾಣಿಸುತ್ತದೆ?
26. ಕೋಡಂಗಿಯು ತಾನು ಬೆಳಿಗ್ಗೆಯಿಂದ ಏನೇನು ಕೆಲಸ ಮಾಡಿದೆನೆಂದು ಹೇಳುತ್ತಾನೆ?
27. ಪಿಶಾಚಿಗಳು ಯಾವುದರಿಂದ ನಾಣ್ಯ ಹಾಗೂ ಸಿಪಾಯಿಗಳನ್ನು ಮಾಡಿಕೊಡುತ್ತವೆ?
28. ಬೋಳೇಶಂಕರ ಏನೆಂದು ಡಂಗುರ ಸಾರಿಸುತ್ತಾನೆ?

## ಇ–ವಿಭಾಗ

**(ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 2x3=06**

29. ಈಗಳ್ ನೀನುಮಗಲ್ವೆತ್ತವೋದೆಯಂಗಾಧಿಪತೀ
30. ಪವಳದ ಲತೆಗೆ ಕೆಂಪಿಟ್ಟವರು ಯಾರೂ.
31. ನೃಪತುಂಗನೆ <u>ಚಕ್ರವರ್ತಿ</u>! ಪಂಪನಲ್ಲಿ ಮುಖ್ಯಮಂತ್ರಿ!

**(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 1x3=03**

32. ಮೊದಲೇ ತೂರಾಡ್ತಿ ಬಿದ್ದು ಗಿದ್ದು ಬುಟ್ಟೀಕನಪ್ಪ.
33. ಜ್ಯೋತಿಷ್ಯ ಒಂದು ವಾಣಿಜ್ಯವಾಗಿದೆ.
34. ಗವಾಕ್ಷಿಯಿಂದ ಮಗನನ್ನು ಕೂಗಿರಬಹುದು.

**(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 1x3=03**

35. ಒಂದು ಹೊತ್ತು ರೊಟ್ಟಿ ತಿನ್ನದಿದ್ದರೆ ನಾನೇನು ಸಾಯುವುದಿಲ್ಲ.
36. ನಾವು ಜಗಳದ ಭಾಷೆ ಆಡಿದರೆ ಅವರು ಸ್ನೇಹದ ಭಾಷೆ ಆಡುತ್ತಾರೆ.

## ಈ–ವಿಭಾಗ

**(ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 2x4=08**

37. ದ್ರೋಣನ ಕಳೇಬರವನ್ನು ಕಂಡು ದುರ್ಯೋಧನ ಹೇಗೆ ದು:ಖಿಸುತ್ತಾನೆ?
38. ಲೋಕದ ಭಜನೆಯಲ್ಲಿ ಸಿಲುಕಿದವರಿಗೆ ಮುಕ್ತಿಯಿಲ್ಲ ಎಂಬುದನ್ನು ಅಕ್ಕ ಹೇಗೆ ನಿರೂಪಿಸಿದ್ದಾಳೆ?
39. ಚೆನ್ನಯ್ಯನಿಗೆ ಶಿವನು ಗಣಪದವಿಯನ್ನು ನೀಡಿದ ಪ್ರಸಂಗವನ್ನು ನಿರೂಪಿಸಿ.
40. ಈ ಕೆಳಗಿನ ಪದ್ಯಭಾಗವನ್ನು ಅರ್ಥೈಯಿಸಿಕೊಂಡು ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ
ಕಡುಪಾತಕಂಗೈದು ಪೆಣ್ಣಾಗಿ ಜನಿಸಿ ತ
ನ್ನೊಡಲಂ ಪೊರೆವುದೆನ್ನೊಳಪರಾಧಮುಂಟು ಸಾಕಿಲ್ಲಿರಲ್ವೇಡ ನೀನು
ನಡೆ ಪೋಗು ನಿಲ್ಲದಿರ್ನಿನಗೆ ಮಾರ್ಗದೊಳಾಗ
ಲಡಿಗಡಿಗೆ ಸುಖಮೆಂದು ಸೀತೆ ಕಂಬಿನಿಗಳಂ
ಮಿಡಿದಾರ್ತೆಯಾಗಿರಲ್ಸೌಮಿತ್ರಿ ನುಡಿದನಾ ವಿಪಿನದಭಿಮಾನಿಗಳ್ಗೆ

ಅ) ಸೀತೆ ಯಾರಲ್ಲಿ ತಪ್ಪಿಲ್ಲವೆಂದು ಹೇಳುತ್ತಾಳೆ? **(1 ಅಂಕ)**

ಆ) ಸೀತೆ ಲಕ್ಷ್ಮಣನಿಗೆ ಏನೆಂದು ಹಾರೈಸಿ ಬೀಳ್ಕೊಡುತ್ತಾಳೆ? **(1 ಅಂಕ)**

ಇ) ಈ ಪದ್ಯಭಾಗದಲ್ಲಿರುವ ಸೀತೆಯ ಭಾವನೆಯನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ. **(2 ಅಂಕ)**

**(ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **1x4=04**

41. ಅವಳಿ ಮಕ್ಕಳ ಸಾವು ಮಾಸ್ತರರ ಬದುಕನ್ನು ಬದಲಾಯಿಸಿದ್ದು ಹೇಗೆ ? ವಿವರಿಸಿ.

42. ನಿರಾಕರಣೆ ಕತೆಯಲ್ಲಿ ಬರುವ ಶಕುಂತಲೆಯ ವ್ಯಕ್ತಿತ್ವವನ್ನು ವಿವರಿಸಿ?

**(ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **1x4=04**

43. ರಾಜಕುಮಾರಿಯ ಹೊಟ್ಟೆನೋವು ಪ್ರಸಂಗದಿಂದ ಬೋಳೇಶಂಕರ ರಾಜನಾದ ಕಥೆಯನ್ನು ತಿಳಿಸಿ?

44. 'ಹಸಿರೆ ಉಸಿರು' ಎಂಬುದನ್ನು ಬೋಳೇಶಂಕರನ ಪಾತ್ರದ ಮೂಲಕ ನಾಟಕಕಾರರು ಹೇಗೆ ಸ್ಪಷ್ಟಪಡಿಸಿದ್ದಾರೆ ? ವಿವರಿಸಿ.

## ಉ–ವಿಭಾಗ

### (ಭಾಷಾಭ್ಯಾಸ)

**(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ.**

**4x2=08**

45. ಕೆಳಗಿನ ಎರಡು ಶಬ್ದಗಳನ್ನು ಬಿಡಿಸಿ ಬರೆಯಿರಿ.

    ಕಾಳೋರಗ, ರಸಾನುಭವ, ಮಹಾತ್ಮ

46. ಕೆಳಗಿನ ಎರಡು ಪದಗಳ ನಾನಾರ್ಥಗಳನ್ನು ಬರೆಯಿರಿ.

    ಅರಸು, ಮೋರಿ, ಕಲ್ಯಾಣ

47. ಕೆಳಗಿನ ಎರಡು ಶಬ್ದಗಳಿಗೆ ತದ್ಭವ ರೂಪ ಬರೆಯಿರಿ.

    ನಿತ್ಯ, ಅಮೃತ, ಶಿಶು

48. ಕೆಳಗಿನ ಎರಡು ಪದಗಳ ವಿರುದ್ಧ ಪದಗಳನ್ನು ಬರೆಯಿರಿ.

    ಆಡಂಬರ, ಟೊಳ್ಳು, ಲೌಖಿಕ

49. ಕೆಳಗಿನ ಎರಡು ನುಡಿಗಟ್ಟುಗಳನ್ನು ನಿಮ್ಮ ಸ್ವಂತವಾಕ್ಯಗಳಲ್ಲಿ ಬಳಸಿ ಬರೆಯಿರಿ.

    ಅಡಿಪಾಯ, ಮುಗಿಬೀಳು, ಮುಖವಾಡ

50. ಯಾವುದಾದರೂ ಎರಡು ಅನ್ಯದೇಶ್ಯ ಪದಗಳನ್ನು ಬರೆಯಿರಿ.

**(ಆ) ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಿರಿ.** **1x4=04**

51. ಮೂಡನಂಬಿಕೆಗಳಿಂದ ಸಮಾಜದ ಮೇಲೆ ಆಗುವ ಪರಿಣಾಮಗಳು

**ಅಥವಾ**

ಜ್ಞಾನಾಭಿವೃದ್ಧಿಯಲ್ಲಿ ಪುಸ್ತಕಗಳ ಮಹತ್ವ

**(ಇ) ಯಾವುದಾದರೂ ಒಂದು ವಿಷಯವನ್ನು ಕುರಿತು ಪತ್ರ ಬರೆಯಿರಿ.** **1x4=04**

52. ಜಾನಕಿ/ಚಂದನ್, ಕುವೆಂಪು ರಸ್ತೆ, ಹನುಮಂತನಗರ, ರಾಮನಗರ ತಾಲ್ಲೂಕು ಈ ವಿಳಾಸದಲ್ಲಿ ನೀವು ವಾಸವಾಗಿರುವಿರೆಂದು ಭಾವಿಸಿ ಮಾನಸಾ/ಶೇಖರ, ಪ್ರಥಮ ಪಿಯುಸಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ಆನವಟ್ಟಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಈ ವಿಳಾಸದಲ್ಲಿನ ನಿಮ್ಮ ಗೆಳೆಯ/ಗೆಳತಿಗೆ ನಿಮ್ಮ ಹುಟ್ಟುಹಬ್ಬಕ್ಕೆ ಆಹ್ವಾನಿಸಿ ಪತ್ರ ಬರೆಯಿರಿ.

**ಅಥವಾ**

ಭಾನು/ದಿವಾಕರ ಪ್ರಥಮ ಪಿಯುಸಿ, ಗೌಸಿಯಾ ಪದವಿ ಪೂರ್ವ ಕಾಲೇಜು, ಜ್ಞಾನಗಂಗಾ ಕ್ಯಾಂಪಸ್, ಮಲ್ಲೇಶ್ವರಂ, ತುಮಕೂರು, ಈ ಕಾಲೇಜಿನಲ್ಲಿ ನೀವು ವಿದ್ಯಾಭ್ಯಾಸ ಮಾಡುತ್ತಿರುವಿರೆಂದು ಭಾವಿಸಿ ನಿಮ್ಮ ಕಾಲೇಜಿನ ಪ್ರಾಂಶುಪಾಲರಿಗೆ ನಾಲ್ಕು ದಿನಗಳ ರಜೆಯನ್ನು ಕೋರಿ ಪತ್ರ ಬರೆಯಿರಿ.